ಒಂದೇ ಒಂದು ಬಾರಿ, ನೀನು ನನ್ನ ಜೊತೆಗಿರಬಯಸುವೆ ಎಂದು ಹೇಳಿಬಿಡು. ಓಹ್ ನನ್ನ ಹಣೆಬರಹವೇ, ನಿನ್ನ ಒಂದು ಒಪ್ಪಿಗೆಗಾಗಿ ನಾನಿಲ್ಲಿ ಕಾದು ಕುಳಿತಿದ್ದೇನೆ. ಸಮಯವೇ ನಿನಗಾಗಿ ಕಾಯುತ್ತಿದೆ. ನನ್ನ ವರ್ತಮಾನ ಭವಿಷ್ಯಗಳೆಲ್ಲಾ ನಿನಗಾಗಿಯೇ ಕಾಯುತ್ತಿವೆ.

ನನ್ನ ಜೀವನವೇ ನಿನ್ನ ಮುಡಿಪಾಗಿದೆ.

ಓಹ್ ನನ್ನ ಜೀವವೇ, ಒಮ್ಮೆ ನನ್ನನ್ನು ಕರೆದುಬಿಡು.

**ಬೆಳಿಗ್ಗೆ 7.30**

***

### ಪತ್ರ 3

ಪ್ರಿಯ ಆಶಿ,

ಭಯ ಮತ್ತು ಭ್ರಮೆಗಳೊಂದಿಗೆ ಜೀವಿಸುವುದು ನಿನಗೆ ಒಪ್ಪುವುದಿಲ್ಲ. ನಿನ್ನನ್ನು ಹಾಗೆ ನೋಡಲು ನನಗೆ ಸ್ವಲ್ಪವೂ ಇಷ್ಟವಿಲ್ಲ. ನೀನು ಯಾವುದಕ್ಕೂ ಭಯಪಡುವ ಅಗತ್ಯವಿಲ್ಲ. ನಾನು ನಿನ್ನೊಂದಿಗೆ ಸದಾ ಕಾಲ ಇರುತ್ತೇನೆ. ನೀನು ನಿನ್ನ ನಂಬಿಕೆಯ ಪರಿಧಿಯನ್ನು ವಿಸ್ತರಿಸಿಕೊಂಡರೆ, ಭಯದ ವ್ಯಾಪ್ತಿ ಚಿಕ್ಕದಾಗುತ್ತದೆ, ಯೋಚಿಸು, ನಿನಗೆ ಅದು ಅರ್ಥವಾಗುತ್ತದೆ. ನಿನ್ನ ವಯಸ್ಸನ್ನು ನೀನು ಸಮಯ, ದಿನ, ವರ್ಷಗಳಲ್ಲಿ ಲೆಕ್ಕ ಹಾಕಬೇಡ. ನನ್ನ ಆಸೆ ಕನಸುಗಳೊಂದಿಗೆ ಲೆಕ್ಕ ಹಾಕಿ ನೋಡು. ನನ್ನ ಹೃದಯ ಬಡಿತ ಮತ್ತು ನನ್ನ ಉತ್ಕಟತೆಯನ್ನು ನಿನ್ನದಾಗಿಸಿಕೋ. ನನ್ನ ಆಸೆ, ನನ್ನ ಹಾತೊರೆಯುವಿಕೆ ನಿನ್ನ ವಯಸ್ಸಾಗಲಿ, ನನ್ನ ಉತ್ಕಟತೆ ನಿನ್ನ ಆರೋಗ್ಯವಾಗಲಿ, ಶಕ್ತಿಯಾಗಲಿ.

ನೀನು ನಿನ್ನ ಭೂತಕಾಲವನ್ನು ಹಿಂದೆ ಬಿಟ್ಟುಬಿಡಲು ಪ್ರಯತ್ನಿಸುತ್ತಿದ್ದೀಯೆ, ನೋವಿನಲ್ಲಿದ್ದೀಯೆ, ನನಗೆ ಗೊತ್ತು.

ಈ ನೋವು ಕ್ಷಣಿಕವಷ್ಟೇ. ಭವಿಷ್ಯದ ಜಗತ್ತಿಗೆ ಬಂದುಬಿಡು! ಭವಿಷ್ಯ, ಮಿಡಿವ ಹೃದಯದೊಂದಿಗೆ ನಗುತ್ತಾ ಕಾಯುತ್ತಿದೆ ನಿನಗಾಗಿ.

ನನ್ನ ಹಣೆಬರಹಕ್ಕಾಗಿ ಕಾಯುತ್ತಾ
ನಿನ್ನ ಭವಿಷ್ಯದ ಜೀತಿ

**ಬಾಂಬೆ, 2 ಅಕ್ಟೋಬರ್ 1959**

***

### ಪತ್ರ 4

ಆಶಿ,

ಈಗ ನಿನ್ನ ಪತ್ರ ತಲುಪಿತು. ನನ್ನ ಹೃದಯದ ರಾಣಿಯಿಂದ ನನಗೊಂದು ಸಂದೇಶ!

ನಿನ್ನೆ ನಿನಗೆ ಬರೆದ ಪತ್ರಗಳನ್ನೆಲ್ಲಾ ಇಂದು ಅಂಚೆಗೆ ಹಾಕಲು ಹೊರಟಿದ್ದೆ. ನಿನಗೆ ನಾನು ದಿನಾ ಪತ್ರ ಬರೆದಿದ್ದೇನೆ ಗೊತ್ತೇ? ಒಮ್ಮೆ ಎಲ್ಲವನ್ನೂ ಓದಿಬಿಡು. ನಂತರ ನಿನಗನ್ನಿಸಿದ್ದನ್ನು ಹೇಳುವಿಯಂತೆ.



**ಅಮೃತಾ ಪ್ರೀತಂ**
**(ಆಗಸ್ಟ್ 31, 1919 – ಅ. 31, 2005)**

ನೀನು ಸಿಟ್ಟಾಗಬೇಡ. ಬೇಸರಿಸಬೇಡ.

ನನಗೆ ಗೊತ್ತಿಲ್ಲ – ನೀನು ನನ್ನ ಜೀವನದ ಸಂಧ್ಯೆಯೋ, ಮುಂಜಾನೆಯೋ, ಮಧ್ಯಾಹ್ನವೋ ಆದರೆ ನೀನು ನನ್ನ ಪರಮಗುರಿ ಎಂದಂತೂ ನನಗೆ ಅರ್ಥವಾಗಿದೆ. ನನಗೆ ಹಾಗೆ ಸಾವಿರಾರು ಬಾರಿ ಅನ್ನಿಸಿದೆ, ಈ ಕ್ಷಣ ಕೂಡ ಅನ್ನಿಸುತ್ತಿದೆ.

ನೀನು ನಿನ್ನನ್ನು ಒಂದು ಸುಂದರ ಸಂಜೆಗೆ ಹೋಲಿಸಿಕೊಳ್ಳಬಹುದು. ಆದರೆ ನೀನು ನನ್ನ ಬೆಳಗು–ಬೈಗು ಎಲ್ಲವೂ ಆಗಿರುವೆ ಎಂಬುದನ್ನು ಮರೆಯಬೇಡ. ಕೇವಲ ಒಮ್ಮೆ ನನ್ನೊಂದಿಗೆ ಬದುಕಿ ನೋಡು. ಹೃದಯಪೂರ್ವಕವಾಗಿ

ನಿನ್ನವನೇ ಆದ
ಜೀತಿ **3 ಫೆಬ್ರುವರಿ 1960**

ಪ್ರತಿಕ್ರಿಯಿಸಿ: **feedback@sudha.co.in**


# ರಾಜೇಂದ್ರ ಆಯುರ್ವೇದಿಕ್ ಕ್ಲಿನಿಕ್

1972 50 Years Golden Jubilee

**ಎಲ್ಲಾ ವಿಧದ ಕ್ಯಾನ್ಸರ್, ಪಾರ್ಶ್ವವಾಯು, ಸಂಧಿವಾತ, ಚರ್ಮ ರೋಗಗಳು, ಸೈನಸ್, ಅಸ್ತಮಾ, ಅಪಸ್ಮಾರ, ಖಿನ್ನತೆ, ಭಯ, ಆತಂಕ, ನಡುಕ ಇತ್ಯಾದಿ ಸೇರಿದಂತೆ ದೀರ್ಘಕಾಲದ ಕಾಯಿಲೆಗಳಿಗೆ ವಿಶೇಷ ವೈದ್ಯಕೀಯ ಚಿಕಿತ್ಸೆ.**



ಮಾನವರಲ್ಲಿ ರೋಗಗಳು ನಾಲ್ಕು ವಿಧದ ಕಾರಣಗಳಿಂದ ಉಂಟಾಗುತ್ತದೆ. ತಪ್ಪುಗಳು – ಅಪಘಾತಗಳು ವಂಶಪಾರಂಪರ್ಯ ಕಾರಣಗಳು ಹಿಂದಿನ ಜನ್ಮ ಕರ್ಮಗಳಿಂದ ಮನುಷ್ಯರು ಪ್ರಭಾವಿತರಾಗಿದ್ದಾರೆ.

**ವಿಜ್ಞಾನ ಆಕಾಶದೆತ್ತರಕ್ಕೆ ಬೆಳೆದು ಜಗತ್ತು ದಿನದಿಂದ ದಿನಕ್ಕೆ ಆಧುನಿಕವಾಗುತ್ತಿದ್ದರೂ ಮೇಲಿನ ಪ್ರಭಾವದ ಚಕ್ರದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಈ ಸಂದರ್ಭದಲ್ಲಿ, ಅಪಘಾತಗಳು ಮತ್ತು ಅನುವಂಶಿಕ ಕಾಯಿಲೆಗಳಿಗೆ ಸಂಬಂಧಿಸಿದಂತೆ ವಿಜ್ಞಾನವು ನಮಗೆ ಉಪಯುಕ್ತವಾಗಿದೆ. ಆದರೆ ಕರ್ಮ ರೋಗಗಳ ಸಂದರ್ಭದಲ್ಲಿ ತಪ್ಪುಗಳು – ಅಪಘಾತಗಳು, ವಿಜ್ಞಾನವು ಖಂಡಿತವಾಗಿಯೂ ಉಪಯುಕ್ತವಲ್ಲ. ಏಕೆಂದರೆ ಕರ್ಮ ರೋಗಗಳು ಬರೀ ಔಷಧದಿಂದ ಗುಣವಾಗುವಂಥದ್ದಲ್ಲ.**

ಭಾರತೀಯ ವೈದ್ಯಕೀಯ ಪದ್ಧತಿಯು ಕರ್ಮ ರೋಗಗಳ ಬಗ್ಗೆ ವಿವರವಾಗಿ ವಿವರಿಸಿದೆ. ಕೆಲವರಿಗೆ ವಿನಾಕಾರಣ ಕಾಯಿಲೆಗಳು ಬರುತ್ತವೆ. ಕೆಲವರಿಗೆ ಎಷ್ಟೇ ಚಿಕಿತ್ಸೆ ನೀಡಿದರೂ ಗುಣವಾಗುವುದಿಲ್ಲ. ಕೆಲವರಿಗೆ ಸೂಕ್ತವಲ್ಲದ ಕಾಯಿಲೆಗಳು ಬರುತ್ತವೆ. ಇದರ ಬಗ್ಗೆ ದೀರ್ಘ ವಿವರಣೆಗಳನ್ನು ನೀಡಬಹುದು. ಡಾ.ಕೆ.ವಿ.ರಾಜೇಂದ್ರನ್ RAMP, DNYS, M.A., ಕಳೆದ 50 ವರ್ಷಗಳಿಂದ ರಾಜ್ಯ ಮಟ್ಟದಲ್ಲಿ ದೇವರು ಮತ್ತು ಗುರುಗಳ ಕೃಪೆಯಿಂದ ಇಂತಹ ಕ್ಲಿಷ್ಟಕರ ಮತ್ತು ಸಂಕೀರ್ಣ ಕಾಯಿಲೆಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡುತ್ತಿದ್ದಾರೆ.

**ಸರಿಯಾದ ಚಿಕಿತ್ಸೆ ದೊರೆಯದೆ ಜಿಗುಪ್ಸೆಗೊಂಡವರು ಕೂಡ ಒಂದು ಭಾರಿ ಭೇಟಿಯಾಗಿ, ಶಾಶ್ವತ ಪರಿಹಾರ ಪಡೆಯಿರಿ.**

**ನಡೆಯಲು ತೊಂದರೆಯಿರುವ ರೋಗಿಗಳಿಗೆ ಅವರವರ ಮನೆಗೆ ಬಂದು ಚಿಕಿತ್ಸೆ ಕೊಡುತ್ತೇವೆ.**

**ಬೆಂಗಳೂರಿನಲ್ಲಿ ಪ್ರತಿ ತಿಂಗಳ 6 ರಿಂದ 25 ರವರೆಗೆ ನೀವು ವೈದ್ಯರನ್ನು ವೈಯಕ್ತಿಕವಾಗಿ ಭೇಟಿ ಮಾಡಬಹುದು.**

ನಂ.4, 6ನೇ ಕ್ರಾಸ್, ಎಂ.ಎಸ್.ರಾಮಯ್ಯ ರಸ್ತೆ (ಎಚ್ಎಂಟಿ ರಸ್ತೆ),
ಅಯ್ಯಪ್ಪ ದೇವಸ್ಥಾನದ ಬಸ್ ನಿಲ್ದಾಣ, ಎಸ್ಸಾರ್ ಪೆಟ್ರೋಲ್ ಬಂಕ್ ಎದುರು,
ಸುಬೇದಾರಪಾಳ್ಯ, ಯಶವಂತಪುರ, ಬೆಂಗಳೂರು–22,

**ಮೊ : 9344455511**